ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-1

ಸಂಖ್ಯೆ:-ಸಿ1(1)ಇತರೆ.ಪಿಯುಸಿ.ಪ.51/2011-12 ದಿನಾಂಕ:24-03-2012

## ಸುತ್ತೋಲೆ

ವಿಷಯ:-2012ನೇ ಸಾಲಿನ ದ್ವಿತೀಯ ಪಿ.ಯು.ಸಿ ಪರೀಕ್ಷೆ ಪ್ರಶ್ನೆ ಪತ್ರಿಕೆಗಳನ್ನು ಖಜಾನೆಯಲ್ಲಿಡಲು ಕ್ಷೇತ್ರ ಶಿಕ್ಷಣಾಧಿಕಾರಿಗಳ ಸೇವೆ ಪಡೆಯುವ ಬಗ್ಗೆ.

ಉಲ್ಲೇಖ:-1.ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ರವರ ಅ.ಸ. ಪತ್ರ ಸಂಖ್ಯೆ:ಪಪೂಶಿ.ಪರೀಕ್ಷೆ.ವಿ.ಪ್ರಪಾ/2011-12 ದಿನಾಂಕ:16-02-2012

2.ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ರವರ ಅ.ಸ. ಪತ್ರ ಸಂಖ್ಯೆ:ಪಪೂಶಿಇ.ಪರೀಕ್ಷೆ.ಪ್ರ.ಪವಿ/2011-12 ದಿನಾಂಕ:23-03-2012

-&&&-

ವಿಷಯ ಹಾಗು ಉಲ್ಲೇಖ-1ಕ್ಕೆ ಸಂಬಂಧಿಸಿದಂತೆ ದಿ:25-02-2012ರಲ್ಲಿ ಈ ಕಛೇರಿಯಿಂದ ಈಗಾಗಲೇ 2012ನೇ ಸಾಲಿನ ದ್ವಿತೀಯ ಪಿ.ಯು.ಸಿ ವಾರ್ಷಿಕ ಪರೀಕ್ಷೆಯು ದಿನಾಂಕ:15.03.2012 ರಿಂದ 31.03.2012 ರವರೆಗೆ ನಡೆಯಲಿದ್ದು, ಈ ಸಂಬಂಧ ರಾಜ್ಯದಲ್ಲಿರುವ ಎಲ್ಲಾ ಉಪನಿರ್ದೇಶಕರು / ಕ್ಷೇತ್ರ ಶಿಕ್ಷಣಾಧಿಕಾರಿಗಳು / ಶಿಕ್ಷಣ ಸಂಯೋಜಕರು ಇವರುಗಳು ಪ್ರಶ್ನೆ ಪತ್ರಿಕೆಗಳ ಪಾಲಕರಾಗಿ ಹಾಗು ಖಜಾನೆಯಲ್ಲಿ ಪ್ರಶ್ನೆ ಪತ್ರಿಕೆಗಳನ್ನು ಸುರಕ್ಷಿತವಾಗಿ ಅಭಿರಕ್ಷಣೆಯಲ್ಲಿಡಲು ಕಾರ್ಯ ನಿರ್ವಹಿಸುವಂತೆ ಸುತ್ತೋಲೆಯ ಮೂಲಕ ಸೂಚಿಸಲಾಗಿತ್ತು.

ಉಲ್ಲೇಖ-2ರಲ್ಲಿ ಗಣಿತ ಮತ್ತು ಭೌತಶಾಸ್ತ್ರ ವಿಷಯಗಳ ಪ್ರಶ್ನೆ ಪತ್ರಿಕೆಗಳು ಬಯಲಾಗಿರುವ ಹಿನ್ನೆಲೆಯಲ್ಲಿ ಪರೀಕ್ಷೆ ನಡೆಸಬೇಕಾಗಿರುವ ಉಳಿದ ಕೆಲವು ವಿಷಯಗಳಿಗೆ ಪರಿಷ್ಕೃತ ವೇಳಾ ಪಟ್ಟಿಯನ್ನು ರಚಿಸಿ ಪ್ರಕಟಿಸಲಾಗಿದ್ದು, ಅದಕ್ಕನುಗುಣವಾಗಿ ಪರೀಕ್ಷಾ ಗೌಪ್ಯ ವಸ್ತುಗಳನ್ನು ದಿನಾಂಕ: 25.03.2012 ರಿಂದ 26.03.2012 ರವರೆಗೆ ರಜಾ ದಿನಗಳೂ ಸೇರಿದಂತೆ ಜಿಲ್ಲಾ ಮತ್ತು ತಾಲ್ಲೂಕು ಖಜಾನೆಗಳಲ್ಲಿ ಠೇವಣಿಸಲಾಗುವುದು. ಸಂಬಂಧಿಸಿದವರು ಖಜಾನೆಯಲ್ಲಿ ಹಾಜರಿದ್ದು, ನಿಗದಿತ ಸಮಯದಲ್ಲಿ ಗೋಪ್ಯ ವಸ್ತುಗಳನ್ನು ಸ್ವೀಕರಿಸಿ ಠೇವಣಿಸಲು ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಸಹಕರಿಸುವಂತೆ ಆದೇಶ ನೀಡಲು ಉಲ್ಲೇಖ ಪತ್ರದಲ್ಲಿ ಈ ಕಛೇರಿಗೆ ಕೋರಿರುತ್ತಾರೆ.

ಅದರಂತೆ ಈಗಾಗಲೇ ಉಲ್ಲೇಖ-1 ರ ಸುತ್ತೋಲೆಯಲ್ಲಿ ತಿಳಿಸಿರುವಂತೆ ದ್ವಿತೀಯ ಪಿ.ಯು.ಸಿ ವಾರ್ಷಿಕ ಪರೀಕ್ಷೆಗಳಿಗೆ ಪದವಿ ಪೂರ್ವ ಶಿಕ್ಷಣ ಇಲಾಖೆಯಿಂದ ಪರೀಕ್ಷಾ ಪ್ರಶ್ನೆ ಪತ್ರಿಕೆಗಳ ಬಂಡಲ್‌ಗಳನ್ನು ಸರಬರಾಜು ಮಾಡುವ ದಿನ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗು ಶಿಕ್ಷಣ ಸಂಯೋಜಕರು ನಿಗಧಿಪಡಿಸಲಾದ ಸ್ಥಳ ಹಾಗು ಸಮಯದಲ್ಲಿ ಹಾಜರಿದ್ದು ತಂಡದ ಇನ್ನಿತರ ಸದಸ್ಯರಾದ ತಹಸೀಲ್ದಾರ್ ಅವರ ಪ್ರತಿನಿಧಿ ಹಾಗು ನಿಯೋಜಿಸಲ್ಪಟ್ಟ ಪ್ರಾಂಶುಪಾಲರೊಡಗೂಡಿ ಬಂಡಲುಗಳನ್ನು ಮಾರ್ಗಾಧಿಕಾರಿಗಳಿಂದ ಪಡೆದು ಖಜಾನೆಯಲ್ಲಿ ಅಭಿರಕ್ಷಣೆಯಲ್ಲಿಡುವ ಕಾರ್ಯವನ್ನು ನಿರ್ವಹಿಸಲು ಸೂಚಿಸಿದೆ.

ಸದರಿ ಕಾರ್ಯವನ್ನು ಸಮರ್ಪಕವಾಗಿ ಸ್ವತ: ಜವಾಬ್ದಾರಿಯಿಂದ ನಿರ್ವಹಿಸದೇ ಪರೀಕ್ಷಾ ಕಾರ್ಯಕ್ಕೆ ಅಡಚಣೆ ಉಂಟಾಗಲು ಕಾರಣರಾಗುವ ಅಧಿಕಾರಿಗಳ ವಿರುದ್ಧ ನಿಯಮಾನುಸಾರ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಮತ್ತೊಮ್ಮೆ ತಿಳಿಯಪಡಿಸಿದೆ.

[ವಿ.ಜಿ.ದಿವಾಕರ್]

ಅಪರ ಆಯುಕ್ತರು

ಇವರಿಗೆ:-

1. ಸರ್ಕಾರದ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು
2. ಆಯುಕ್ತರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರಂ, ಬೆಂಗಳೂರು-3
3. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಉಪನಿರ್ದೇಶಕರುಗಳಿಗೆ ಮಾಹಿತಿಗಾಗಿ
4. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ
5. ಮಾನ್ಯ ಆಯುಕ್ತರ ಆಪ್ತ ಕಾರ್ಯದರ್ಶಿಗಳಿಗೆ ಮಾಹಿತಿಗಾಗಿ
6. ಸಹನಿರ್ದೇಶಕರು (ಆಡಳಿತ) ರವರ ಆಪ್ತ ಶಾಖೆ
7. ಕಛೇರಿ ಪ್ರತಿ *\\3-server\Typing3\D\EST1\Suttole-Prashna-Patrike[PUC]-1.doc*